# ನವಮಂಗಳೂರು ನಿರ್ಮಾತೃಗೆ ನಮನ



ಆಧುನಿಕ ಕರಾವಳಿ ಜಿಲ್ಲೆಗಳ ಅಭಿವೃದ್ಧಿಯ ರೂವಾರಿ, ಮಾಜಿ ಸಂಸದ ದಿ.ಉಳ್ಳಾಲ ಶ್ರೀನಿವಾಸ ಮಲ್ಯರ 122ನೇ ಜನ್ಮ ದಿನಾಚರಣೆ ಸಂದರ್ಭ ಗುರುವಾರ ಎನ್‌ಐಟಿಕೆ ಎದುರಿನ ಮಲ್ಯರ ಪ್ರತಿಮೆಗೆ ಎನ್‌ಐಟಿಕೆ ವತಿಯಿಂದ ಹೂ ಹಾರ ಅರ್ಪಿಸಿ ಗೌರವ ಸಲ್ಲಿಸಿ ಎನ್‌ಐಟಿಕೆ ಸ್ಥಾಪನೆ ಸೇರಿದಂತೆ ಅವರ ನಾನಾ ಕೊಡುಗೆಗಳನ್ನು ಸ್ಮರಿಸಲಾಯಿತು. ಎನ್‌ಐಟಿಕೆ ನಿರ್ದೇಶಕ ಪ್ರೊ.ಬಿ. ರವಿ, ಉಪ ನಿರ್ದೇಶಕ ಸುಭಾಸ್ ಸಿ. ಯರಗಲ್, ರಿಜಿಸ್ಟ್ರಾರ್ ಡಾ. ರವೀಂದ್ರನಾಥ್, ಎನ್‌ಐಟಿಕೆ ನೌಕರರ ಸಂಘ ಮಾಜಿ ಅಧ್ಯಕ್ಷ ದಾಮೋದರ ಕೆ. ಶೆಟ್ಟಿ, ವಿಭಾಗ ಮುಖ್ಯಸ್ಥರು ಮತ್ತಿತರಿದ್ದರು.

Vijaya Karnataka, Date:22/11/24, p, no - 02